ಬಿಡ್ರಿ... ಈಗ ಇಷ್ಟೊತ್ತನ ಇಡೀ ದಿನದ್ದು, ವಾರದ್ದು ಹೆಂಗ ಹೇಳಿದ್ನೋ... ಅದರ್ಹಂಗೆ ಇವೂ ಖರೇನೆ ಆಗೂವಂಥಾವು.

ಇಡೀ ಜನ್ಮಕ್ಕಾಗುವಷ್ಟು ಹೈರಾಣಾಗಿದ್ರೂ ಸೀರಿ ಬಣ್ಣ ನೋಡಿದ ಕೂಡ್ಲೆ ಮನಸು ಚಿಗರ್ತದ. ಇಡೀ ಜೀವನದ ಒತ್ತಡ ಎಲ್ಲೆರೆ ಕಳಿಯೂಹಂಗಿದ್ರ ಅದು ಹೊಸಾ ಅರವಿ ಕೊಳ್ಳೂದ್ರೊಳಗ. ನಾವು ದುಡೀತೇವಿ, ನಾವು ಖರ್ಚು ಮಾಡ್ತೇವಿ ಅನ್ನೂ ಉಮ್ಮೇದಿ ಅಲ್ಲದು ಮತ್ತ. ವರ್ಷದಾಗ ಒಂದೆರಡು ಸೀರಿ ತೊಗೊಳ್ಳಾಕೂ ಇಡೀ ವರ್ಷ ಲೆಕ್ಕ ಹಾಕಿರ್ತೇವಿ. ಈ ಸಲ ಶ್ರಾವಣದಾಗ ವರಮಹಾಲಕ್ಷ್ಮಿಗೆ ಒಂದು. ದೀಪಾವಳಿ ಲಕ್ಷ್ಮಿಗೆ ಒಂದು ಎರಡೇ ಎರಡು ಸೀರಿರಿ. ಇಡೀ ವರ್ಷ ಕಣ್ತುಂಬ್ಕೊತೀವಿ. ನಮ್ಮಕ್ಕ ಅಂತೂ ತಪ್ದೇ ಸೀರಿ ತೊಗೊಳ್ಳೂದು ಇವೆರಡೂ ಹಬ್ಬಕ್ಕ. (ಮಾಮಾರ ಖರ್ಚಿನಾಗ) ಅಕಿನ್ನ ಉಳಕಿನೆ, ಗಳಕಿ. ನಮ್ಮದಂತೂ ಗಳಕಿ ಎಲ್ಲವೂ ಎಲ್ಲೆಲ್ಲೋ ಕಳಕಿ. ಉಳಕಿನೂ ಇಲ್ಲ ಗಳಕಿನೂ ಇಲ್ಲ.

ಅಕಿ ಯವಾಗಲೂ ಹೇಳಾಕ್ಕಿ, 'ಮನೀ ಲಕ್ಷ್ಮಿ ನೀನು... ನೀ ಏನ್ ಲೆಕ್ಕಾ ಹಾಕ್ತಿಲೆ? ನಾವೆಲ್ಲಾರೂ ಆಸಿ ಪಡೂವಂಥ ಸೀರಿ ತೊಗೊಬೇಕು ನೀನು... ನೀ ಏನು... ಎಲ್ಲಾರೂ ಆರಿಸಿ ಬಿಟ್ಟೋರಂಥ ಸೀರಿ ತೊಗೊತಿಯಲ್ಲ? ತಿಳಿಯೂದಿಲ್ಲ... ನಿಂಗ... ಏನಾಗೂದಿಲ್ಲ, ನಿನ್ನ ಗಂಡಗ ಹೇಳು... ಇಷ್ಟರದ್ದು ಈ ವರ್ಷ ತೊಗೊಳಾಕ್ಕಿನ ಅಂತ... ಇಲ್ಲಾಂದ್ರ ನೀನೆ ಕೊಡಸು ನಡಿ ಅಂತರೆ ಅನ್ನು'.

**ಮುಂಜೇನಿ ವ್ಯಾಳೆದಾಗ ನಾವು ನಾವಾಗೂದೇ ಇಲ್ಲ. ಕುರ್ಚಿಗೆ ಬೆನ್ನಾನಿಸಿ, ಕೈಯ್ಯಾಗ ಪೇಪರ್ ಹಿಡ್ಕೊಂಡು ಹೊಗಿಯಾಡುವ ಛಾ ಕುಡ್ಕೊಂತ ಕುಂದ್ರೂದು ಇನ್ನು ಯಾವ ಕಾಲಕ್ಕೋ ಅಂತ ಅನಸ್ತೇ ಇರದು. ಆದ್ರ ಹಂಗೆಲ್ಲ ಭಾಳ ಅನುಕಂಪ ಪಟ್ಕೊಂತ ಕೂರುವ ಹಂಗಿಲ್ಲ ನಾವು...**

ಹಂಗಂದಾಗೆಲ್ಲ ನಾವು, 'ಆಯ್ತು ರಾಜು ಅಕ್ಕ. ಹಂಗ ಮಾಡ್ತೇನಿ ಈ ಸಲೆ' ಅಂತ ಕೌಲೆತ್ತಿನ್ಹಂಗ ಗೋಣು ಹಾಕೋರು. ಆದ್ರ ಯವಾಗಲೂ ಈ ಋತು ಸಂಧಿಕಾಲ ಅವಾಗ್ಲೇ ಬರ್ತಾವ. ಮಕ್ಕಳಿಗೆ ಅರಾಮ ತಪ್ಪಿ, ಇಲ್ಲಾಂದ್ರ ನಮಗ ಅರಾಮ ತಪ್ಪಿ ನಮ್ಮ ಬಜೆಟ್‌ನಾಗಿನ ಸಿಂಹಪಾಲು ಡಾಕ್ಟರ್‌ಗೆ ಬಡದು ಬರ್ತೀವಿ. ಅವಾಗ ಈಗ ಭಾಳ ಖರ್ಚಾಗೇದ... ಮತ್ತೆಲ್ಲಿ ಕೇಳೂನು... ಅಂತ ಅನ್ಕೊಂತ ಇರೋದ್ರೊಳಗೆ ಬಟ್ಟೆ ಹುಡಕ್ತೇವಿ. ಅದ್ರೊಳಗೂ ಎಂಥಾ ಲೆಕ್ಕಾಚಾರ ಅಂತೀರಿ... ಒಂದು ಸೀರಿ ತೊಗೊ ಅಂತ ಎರಡು ಸಾವಿರ ರೂಪಾಯಿ ಕೊಟ್ರ ಅದ್ರೊಳಗ ಎರಡು ತೊಗೊಂಡ್ರ ಹೆಂಗ, ನಾಲ್ಕು ತೊಗೊಂಡ್ರ ಹೆಂಗ... ನಾಲ್ಕು ತೊಗೊಳ್ಳೂದೆ ಛೊಲೊ. ನಾದಿನಿ ಮನಿಗೆ ಬಂದ್ರ ಒಂದು ಕುಂಕುಮ ಹಚ್ಚಿ ಕೊಡಬಹುದು. ಅತ್ತಿ ಹತ್ರ ಯವಾಗಲೂ ಇಸ್ಕೊಂತೀನಿ... ಅವರಿಗೂ ಒಂದು ಕೊಟ್ಟಾತು... ಹೆಂಗಿದ್ರೂ ಇದೇ ತಿಂಗಳದ ಅವರ ಹುಟ್ಟುಹಬ್ಬ..

ಇಂಥವೇ ಲೆಕ್ಕಾಚಾರದಾಗ ಇರ್ತೀವಿ. ಆ ಸೀರಿ ತೊಗೊಂಡು ಬಂದು, ಮತ್ತೊಮ್ಮೆ ಮನ್ಯಾಗ ಹರವಿ ಸೆರಗು ಹಾಕ್ಕೊಂಡು ನೋಡಿ, ಒಡಲು ಮುಟ್ಟಿ ನೋಡಿ, ಅಂಚು ಅಂಥಾವು ಯಾವೂ ಇಲ್ಲ ಹೌದಲ್ಲೋ ಅಂತ ಮನವರಿಕೆ ಮಾಡಿಕೊಳ್ಳೂದ್ರಾಗ ಇರೂ ಸುಖ... ಯಾವ ಗಂಡಗ ಬಯ್ಯೊದ್ರೊಳಗೂ ಸಿಗೂದಿಲ್ಲ. ಈ ಖುಷಿ ಕೇವಲ ಸೀರಿ ಖರೀದಿಗೆ ಮುಗಿಯೂದಿಲ್ಲ. ಮಕ್ಕಳಿಗೆ